ತಾರೀಖು 2ನೆ ಜುಲೈ 1907.

ನಂ. ಫೈ. 16—ಜ. ಫೈ. 101-06—14, ಕಂಟ್ರೋಲರಿಗೆ ಚೀಫ್ ಅಸಿಸ್ಟೆಂಟ್‌ರಾದ ಮಿ|| ಟಿ. ವೈಯ್ಯಾಪುರಿಜೆಟ್ಟಿಯವರಿಗೆ 1907ನೆ ಇಸವಿಯ ಜನವರಿ 31ನೆ ತಾರೀಖಿನ ಫೈ. 5693ನೆ ನಂಬರಿನ, ಅದೇ ಇಸವಿಯ ಏಪ್ರಿಲ್ 1ನೆ ತಾರೀಖಿನ ಫೈ. 7425ನೆ ನಂಬರಿನ ಮತ್ತು ಅದೇ ಇಸವಿ ಏಪ್ರಿಲ್ 30ನೆ ತಾರೀಖಿನ ಫೈ. 8154ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಗಳಲ್ಲಿ ಸ್ವಂತ ಕೆಲಸಗಳ ಬಗ್ಗೆ ಕೊಡಲ್ಪಟ್ಟ 5 ತಿಂಗಳ ರಜಾವನ್ನು 1907ನೆ ಇಸವಿಯ ಜೂ 30ನೆ ತಾರೀಖಿನ ವರೆಗೆ (ಆ ದಿನವೂ ಸೇರಿ) ಹೆಚ್ಚಿಸಿ ಇದೆ.

ತಾರೀಖು 5ನೆ ಜುಲೈ 1907.

ನಂ. ರೆ. 89—ಲ್ಯಾ. ರೆ. 1-07—3, ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ವಿಜ್ಞಾಪಿಸುವುದೇನೆಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ನೆಲವಂಗಲ ತಾಲ್ಲೂಕಿನ ಮಾಜೋಹಳ್ಳಿ ಕೆರೆಯ (ರಿಜಿಸ್ಟರ್ ನಂಬರ್ 306) ಕೋಡಿಗೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ದೊಡ್ಡಬಳ್ಳಾಪುರ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂಬರ್.	ಖುಷ್ಕಿ ತರಿ ಯಾ ಬಾಗಾಯಿತು	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ನೆಲಮಂಗಲ.	ದಾಸನಪುರ	ಮಾಜೋಹಳ್ಳಿ	ಕರಿಯಪ್ಪ	57	ಖುಷ್ಕಿ	ಎ. ಗು. 0 5	ಮಾಜೋಹಳ್ಳಿ ಕೆರೆ	ಸರ್ವೆ ನಂ. 57ರ ಪೈಕಿ ಉಳಿದ ಭಾಗ	ಸರ್ವೆ ನಂ. 57ರಲ್ಲಿ ಹರಿಯುವ ಮೇಲಿ ಕಂಡಿ ಕೆರೆಯ ಕೋಡಿ.	ಸರ್ವೆ ನಂ. 57ರ ಪೈಕಿ ಉಳಿದ ಭಾಗ

ತಾರೀಖು 8ನೆ ಜುಲೈ 1907.

ನಂ. ರೆ. 226—ಫಾ. 5-07—2, ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ|| ಎಚ್. ರಾಮಯ್ಯನವರು 1907ನೆ ಇಸವಿಯ ಮೇ 29ನೆ ತಾರೀಖಿನ ಆರ್. 10150—ಫಾ. 198-06—2ನೆ ನಂಬರ್ ಮತ್ತು 1907ನೆ ಇಸವಿ ಜೂ 5ನೆ ತಾರೀಖಿನ ಆರ್. 10430—ಫಾ. 198-06—4ನೆ ನಂಬರುಗಳ ಇಸ್ತಿಹಾರ್ನಾಮೆಗಳಲ್ಲಿ ತನಗೆ ಕೊಡಲ್ಪಟ್ಟ ಪ್ರಿವಿಲೇಜ್ ರಜಾವನ್ನು 1907ನೆ ಇಸವಿಯ ಮೇ 17ನೇ ತಾರೀಖಿನಿಂದ ಉಪಯೋಗಿಸಿಕೊಂಡು 1907ನೆ ಇಸವಿ ಜೂ 14ನೆ ದಿವಸದ ಅಪರಾಹ್ನದಲ್ಲಿ ಕೆಲಸದ ಮೇಲೆ ಹಾಜರಾಗಿರುವುದರಿಂದ ಅವರು ಉಪಯೋಗಿಸಿಕೊಳ್ಳದೆ ನಿಂತಿರುವ ಒಂಭತ್ತು ದಿವಸದ ರಜಾವನ್ನು ಈ ವರ್ಷಕ್ಕೆ ರದ್ದುಮಾಡಿ ಇದೆ.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.
ಇಸ್ತಿಹಾರ್ನಾಮೆ.

ತಾರೀಖು 5ನೆ ಜುಲೈ 1907.

ನಂ. 612-4848, ಮೈಸೂರು ಡಿವೀಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜಿನಿಯರ್ ಮಿ|| ವಿ. ವಿ. ಕರ್ವಿ, ಎಲ್. ಸಿ. ಇ., ಯವರಿಗೆ ಈ ಆಫೀಸಿನ ಸ್ 1907ನೆ ಜೂ 12ನೆ ತಾರೀಖು 542-4263ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಸ್ 1907ನೆ ಮೇ 20ನೆ ತಾರೀಖು ಲಾಗಾಯಿತು ಕೊಟ್ಟಿದ್ದ ಒಂದು ತಿಂಗಳು ಪ್ರಿವಿಲೇಜ್ ರಜಾವನ್ನು ಅವರು ಉಪಯೋಗಿಸಿಕೊಂಡು ಜೂ 15ನೆ ತಾರೀಖಿನ ಮಧ್ಯಾಹ್ನ ಕೆಲಸದ ಮೇಲೆ ಹಾಜರಾದ್ದರಿಂದ, ಅವರು ಉಪಯೋಗಿಸಿಕೊಳ್ಳದ ರಜವನ್ನು ರಜಾ ಮಾಡಲ್ಪಟ್ಟಿದೆ.

ತಾರೀಖು 6ನೆ ಜುಲೈ 1907.

ನಂ. 614—4859, ಮಾರಿಕನವೆ ಡಿವೀಜನಿಗೆ ಸೇರಿದ ಅಸಿಸ್ಟೆಂಟು ಇಂಜನಿಯರಿ ಮಿ|| ಕೆ. ಅನಂತಾಚಾರಿಯ, ಎಲ್. ಸಿ. ಇ., ಯವರಿಗೆ ಸ್ 1907ನೆ ಜೂ 15ನೆ ತಾರೀಖಿನಿಂದ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ತಾರೀಖು 6ನೆ ಜುಲೈ 1907.

ನಂ. 615—4860, ಚಿತ್ರದುರ್ಗದ ಡಿವೀಜನಿಗೆ ಸೇರಿದ ಅಸಿಸ್ಟೆಂಟು ಇಂಜಿನಿಯರ್ ಮಿ|| ಬಿ. ನಂಜುಂಡಾರಾಧ್ಯ, ಎಲ್. ಸಿ. ಇ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಆರ್ಟಿಕಲ್ ಅನುಸರಿಸಿ ಸ್ 1907ನೆ ಜುಲೈ 31ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದುವರೆ ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಬರ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್‌ಮೆಂಟ್ ಅಂಡರ್ ಸೆಕ್ರಿಟರಿ.